# ಕನ್ನಡ ಋತು ಸಂಹಾರ

## ಗ್ರೀಷ್ಮ ಋತು ವರ್ಣನೆ

ತಗರ ಪದ

ಪ್ರಚಂಡವಾದ ದಿನಕರಂ ಜಗವನೆಲ್ಲ ತಪಿಸಿರೆ
ಮನೋಜ್ಞವಾದ ಹಿಮಕರಂ ತಣ್ಣನಂತೆ ಸೂಸಿರೆ
ದಿನಾಂತ ಕಾಂತ ಸಮಯ ತಾನತಿ ಪಸಂದವಾಗಿರೆ
ಜಲಾವಗಾಹದಿಂದಲಾನಂದ ಮಂದಿಗಾಗಿರೆ
ಗ್ರೀಷ್ಮಸಿಂಹ ಬಂದನೀ ಧರೆಗೆ ಮನ್ನಿಸೋಣರೆ!

ಚೆಂದ ಪದ

ಚಂಡದಾವಾನಲನ ಉರಿಗೆ ಬೆಂದುಳಿದಿರುವ
ಗರಿಕೆಪುಲ್ಲುಗಳ್ ಕರಿಕರಿಸೆಯುತ್ತಿರಲು
ಭೀಷ್ಮವಾತಾಹತಿಗೆ ಸಿಲುಕಿ ತಿರ್ರನೆ ತಿರುವ
ಒಣಗಿದೆಲೆ ಸುತ್ತಿತ್ತ ಹಾರುತಿರಲು
ಸುಡುವ ತಪನಾತಪಕೆ ಬಿರಿದ ನೆಲೆಯೊಳಾಗಿರುವ
ಬಿರುಗೊರ್ಗಳಲ್ಲಲ್ಲಿ ತೋರುತಿರಲು
ಗ್ರೀಷ್ಮಋತುವಿನೊಳಿಂತು ಭೀಷ್ಮವಾಗಿರೆ ವನವು
ನೋಡೆ ಬೆದರುವುದದನು ನನ್ನ ಮನವು

ಕುಂಬರಾಳ

ಚಂಡಕಿರಣಜಾಲದಿಂದೆ ದಹಿಸುವ ಧರೆಯನೆಲ್ಲ ದಹಿಸೆ
ಧೂಳನೆರಚಿ ಕಸವನೊಟ್ಟಿ ಜನರ ಮನವ ಬಳಲಿಗೊಳಿಸಿ
ಕಾದ ಗಾಳಿ ರಭಸದಿಂದ ಸುಟ್ಟುರಿವೊಲು ಹರಿದು ಬೀಸೆ
ಸರ್ವ ಜೀವ ಜಾಲಕಿಂದು ಬೇಸಗೆಯುರಿ ನಮುಪ್ಪತ್ತೆ

## ಪ್ರಗಲ್ಭೆ

ನಿನ್ನೆ ಇರುಳಲಿ ಮುಡಿದ ಕುಸುಮ ಹಾರವನಿಂದು
ಮತ್ತೆ ಮುಂಜಾನೆಯಲಿ ನೋಡಿದವಳು
ಆ ಹಾರ ಬಾಡಿರಲು ಅದನು ತುರುಬಿಂದೆಳೆದು
ಬೇರೊಂದು ಹೂ ಮುಡಿದು ಬರುತಹಲಿಹಳು

## ಪ್ರಣಯ

ಅರಸಿನ ಕುಂಕುಮ ಶೋಭಿಸುತೆಸೆದು
ಕಣ್ಣನು ಮೋಹಿಸಿ ಬಳಿಸೆಳೆಯೆ
ಮದನೋದ್ದೀಪಕ ಪಾನವನೊಸೆದು
ಕೈಯೊಳಗಿರಿಸುತ ಸತಿ ಸುಳಿಯೆ
ಆ ಕ್ಷಣ ಆಮೋದಾವೃತನೆನಿಸಿ
ನಲ್ಲೆಯ ನಲ್ಮೆಗೆ ಮನ ಸಲಿಸಿ
ತನ್ನನೆ ಮರೆವನೊ ಪುಳಕಿತನಾಗಿ
ಪ್ರೇಮದಿನಾಲಂಗಿತನಾಗಿ.

## ಚೇಷ್ಟೆ

ತೊಂದಾವರೆಪೋಲು ಮೆರೆಯುವ ಮೊಗದಲಿ
ಬೆವರಿನ ಹನಿಗಳ ಮಣಿಮಾಲೆ
ಮಿರುಗುತಲಿರುವುದು ರತ್ನಾಭರಣದೊ-
ಳೊಪ್ಪುವ ಮುತ್ತಿನ ಮಣಿಪೋಲೆ

## ಹಾವ

ನಡೆನುಡಿಯೊಳಲಸಿಕೆಯು ತಲೆದೋರುವಂತಾಡಿ
ಸಲಸಲಕೆ ಆಕಳಿಸುವಂತೆ ಮಾಡಿ
ಮಾರಸೀ ವಧುಗಳಲಿ ಬೇರೊಂದು ಹೊಸ ಗಾಡಿ
• ತೋರುವಂತೆಸಗುವನು ಎಂಥ ಮೋಡಿ!

